48

# ಅನುಬಂಧ-1

## ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿ:

ಅ) ಪ್ರತಿ ಜಿಲ್ಲೆಗೆ ಸಂಬಂಧಿಸಿದಂತೆ 800 ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ (ಕನ್ನಡ 400 ಆಂಗ್ಲ 400) ಮುದ್ರಣ ಮತ್ತು ವಿತರಣೆ ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದು.

ಆ) ಮುದ್ರಣ ಕಾರ್ಯದ ಪೂರ್ವದಲ್ಲಿ ಹಾಗೂ ಮುದ್ರಣ ಕಾರ್ಯ ನಡೆಯುತ್ತಿರುವ ಸಂದರ್ಭದಲ್ಲಿ ಸಂಬಂಧಪಟ್ಟ ಲೀಡ್ ಏಜೆನ್ಸಿಯವರು ವರದಿಯಲ್ಲಿ ಅಡಕವಾಗಿರುವ ಅಧ್ಯಾಯಗಳ, ಅಂಕಿ-ಅಂಶಗಳ ಇತ್ಯಾದಿ ವಿಷಯಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು.

ಇ) ಮುದ್ರಣ ಹಾಗೂ ವಿತರಣೆಗಾಗಿ ಪ್ರತಿ ಜಿಲ್ಲೆಗೆ ಬಿಡುಗಡೆಯಾಗಬೇಕಾದ ರೂ. 5,20,000/- (400 ಕನ್ನಡ, 400 ಆಂಗ್ಲ) ನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಬಿಡುಗಡೆ ಮಾಡುವುದು.

ಈ) ಕರ್ನಾಟಕ ಪಾರದರ್ಶಕ ಕಾಯ್ದೆಯನ್ವಯ ಉತ್ತಮ ಗುಣಮಟ್ಟದ ಹಾಗೂ ಅನುಭವವಿರುವ ಮುದ್ರಣಾಲಯಗಳಿಂದ ದರಪಟ್ಟಿ ಆಹ್ವಾನಿಸಿ, ನಿಯಮಾವಳಿಯಂತೆ ಗುಣಮಟ್ಟದ ಮುದ್ರಣ ಕಾರ್ಯ ನಿರ್ವಹಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

ಉ) ವರದಿಯನ್ನು ಮುದ್ರಿಸುವ ಪೂರ್ವದಲ್ಲಿ ಪ್ರತಿ ಜಿಲ್ಲೆಯ ಕನ್ನಡ ಹಾಗೂ ಆಂಗ್ಲ ಭಾಷೆಯ ಕರಡುಗಳು ಯೋಜನಾ ಇಲಾಖೆಯಿಂದ ಅನುಮೋದಿತವಾಗಿರಬೇಕು.

ಊ) ಮುದ್ರಣ ಕಾರ್ಯ ಪೂರ್ಣಗೊಂಡ ನಂತರ ಕನ್ನಡ ಹಾಗೂ ಆಂಗ್ಲ ಭಾಷೆಯ ಪ್ರತಿಗಳನ್ನು ಸಾರ್ವಜನಿಕ ಸಮಾರಂಭದಲ್ಲಿ ಆಯಾ ಜಿಲ್ಲೆಯ ಸಂಬಂಧಿಸಿದ ಸಚಿವರು, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ವಿಧಾನ ಸಭಾ ಸದಸ್ಯರು, ಲೋಕಸಭಾ ಸದಸ್ಯರುಗಳ ಸಮಕ್ಷಮದಲ್ಲಿ ಅಧಿಕೃತವಾಗಿ ಬಿಡುಗಡೆಯಾಗುವಂತೆ ಕ್ರಮವಹಿಸುವುದು ಹಾಗೂ ಕಾರ್ಯಾಗಾರಗಳ ಮೂಲಕ ಜನರಲ್ಲಿ ಅರಿವು ಮೂಡಿಸುವುದು.

ಎ) ಅಧಿಕೃತವಾಗಿ ಬಿಡುಗಡೆಯಾದ ವರದಿಯ ಪ್ರತಿಗಳನ್ನು **ಅನುಬಂಧ-2**ರ ಪ್ರಕಾರ ಸಂಬಂಧಿಸಿದವರಿಗೆ ವಿತರಿಸತಕ್ಕದ್ದು ಹಾಗೂ ಉಳಿದ ಪ್ರತಿಗಳನ್ನು ಜಿಲ್ಲಾ ಪಂಚಯತ್ ಕಛೇರಿಯಲ್ಲಿಟ್ಟು ಆಗಿಂದಾಗ್ಗೆ ಬರಬಹುದಾದ ಬೇಡಿಕೆಗನುಸಾರ ವಿತರಿಸುವುದು.

ಏ) ವರದಿಗಳ ಮುದ್ರಣ ಕಾರ್ಯಕ್ಕೆ ಖರ್ಚಾದ ಹಣದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಆಡಿಟೆಡ್ ಸ್ಟೇಟ್‌ಮೆಂಟ್ ನೊಂದಿಗೆ ಕಳುಹಿಸಬೇಕು. ವಿತರಣಾ ಕಾರ್ಯ ಪೂರ್ಣಗೊಂಡ ನಂತರ ಯಾರು ಯಾರಿಗೆ ಪ್ರತಿಗಳನ್ನು ಕಳುಹಿಸಿದೆ ಎಂಬ ಬಗ್ಗೆ ಪಟ್ಟಿಯನ್ನು ಯೋಜನಾ ಇಲಾಖೆಗೆ ಸಲ್ಲಿಸತಕ್ಕದ್ದು.

ಐ) ಹಣ ಬಿಡುಗಡೆಯಾದ ಒಂದು ತಿಂಗಳೊಳಗೆ ಮುದ್ರಣ ಕಾರ್ಯ ಹಾಗೂ ವಿತರಣಾ ಕಾರ್ಯ ಪೂರ್ಣಗೊಳಿಸುವುದು. ಬಿಡುಗಡೆಯಾದ ಹಣದ ಮಿತಿಯೊಳಗೆ ಮುದ್ರಣ ಹಾಗೂ ವಿತರಣಾ ಕಾರ್ಯದ ಖರ್ಚನ್ನು ಭರಿಸುವುದು. ನಿಗಧಿತ ಹಣಕ್ಕಿಂತ ಹೆಚ್ಚಿನ ಹಣ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಲು ಅವಕಾಶವಿರುವುದಿಲ್ಲ.

ಒ) ಪ್ರತಿ ಹಂತದ ಪ್ರಗತಿಯ ವಿವರಗಳನ್ನು ಆಗಿಂದಾಗ್ಗೆ ಯೋಜನಾ ಇಲಾಖೆಗೆ ತಿಳಿಸುವುದು.

(ರಫೀಕ್ ಅಹಮದ್ ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-1&2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.